ಪ್ರಕಾಶಕರು ಇದ್ದಾರೆ' ಎಂದು ಹೇಳಿದೆ. ಹಾಗೆಯೇ ಕನ್ನಡ ಪತ್ರಿಕೆಗಳೂಸಹಮಲಯಾಳಂಕಥೆಗಳಅನುವಾದವನ್ನು ಉತ್ಸಾಹದಿಂದಲೇ ಪ್ರಕಟಿಸುತ್ತವೆ ಎಂದೂ ನೆನಪಿಸಿದೆ. ಅವರು ಆಲನಹಳ್ಳಿ, ಕಂಬಾರರ ಕೃತಿಗಳನ್ನು 'ಮಾತೃಭೂಮಿ' ಪತ್ರಿಕೆಯ ಸಂಪಾದಕರಾಗಿದ್ದಾಗ ಧಾರಾವಾಹಿಯಾಗಿ ಪ್ರಕಟಿಸಿರುವುದನ್ನು ನೆನಪಿಸಿಕೊಂಡರು.

ಕನ್ನಡ ಲೇಖಕರ ಬಗೆಗೆ ಮಾತನಾಡುತ್ತ ಎಂ.ಟಿ. ಯವರು ಕಂಬಾರರ ಬಗೆಗೆ ವಿಚಾರಿಸಿದರು. ಪರಸ್ಪರ ಸ್ನೇಹ ಸಂಬಂಧವಿರುವುದನ್ನು ಹೇಳಿದ್ದಲ್ಲದೆ, ಚೈನಾಕ್ಕೆ ಜೊತೆಯಾಗಿ ಹೋದುದನ್ನು ಸ್ಮರಿಸಿದರು. ಕನ್ನಡ ಮತ್ತು ಮಲಯಾಳಂ ಸಾಹಿತ್ಯ ಪರಸ್ಪರ ಸಂಪರ್ಕಕ್ಕೆ ಬರುವಲ್ಲಿ ಅನುವಾದಕರ ಸಾಧನೆ ಬಹಳ ದೊಡ್ಡದು ಎಂಬುದನ್ನು ಹೇಳಿದರು. ಈಗಿನ ಹೊಸ ತಲೆಮಾರಿನಲ್ಲಿ ಬರಹಗಾರರು, ಅನುವಾದಕರು ಕಡಿಮೆಯಾಗುತ್ತಿದ್ದಾರಲ್ಲ ಎಂಬುದಕ್ಕೆ – 'ಅದು ಕಾಲದ ಅಗತ್ಯಗಳಿಗೆ ಸಂಬಂಧಿಸಿದ್ದು. ಯಾವಾಗ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿ ಬದುಕುವ ಸ್ವಾತಂತ್ರ್ಯ ಎಲ್ಲರಿಗೂ ಇದೆಯಲ್ಲ' ಎಂದರು.

ಹೊರಡುವ ಸಮಯವಾಯಿತೆಂದು ಕಾರು ಡ್ರೈವರು ನೆನಪಿಸಿದ. ಎಂ.ಟಿ. ಹೊರಟು ನಿಂತರು. ಅನೀಸ್ ನಮ್ಮಿಬ್ಬರ ಫೋಟೋ ಕ್ಲಿಕ್ಕಿಸಿದರು.

ಚಲನಚಿತ್ರ ರಂಗದಲ್ಲಿಯೂ ಎಂ.ಟಿ. ತಮ್ಮ ಛಾಪು ಮೂಡಿಸಿದ್ದಾರೆ. 'ನಿರ್ಮಾಲ್ಯಂ', 'ಒರು ವಡಕ್ಕನ್ ವೀರಗಾಥಾ' ಮೊದಲಾದವುಗಳು ಅವರ ಕೀರ್ತಿಯನ್ನು ಉತ್ತುಂಗಕ್ಕೊಯ್ದಿವೆ. ಅವರ ಕರಸ್ಪರ್ಶದ ಚಲನಚಿತ್ರಗಳಿಗೆಅನೇಕಪ್ರಶಸ್ತಿಪುರಸ್ಕಾರಗಳುಲಭಿಸಿವೆ. ಸಿನಿಮಾ ಅವರ ಸೃಜನಶೀಲತೆಗೊಂದು ಕೇಳೀರಂಗ.

ಏಳು ದಶಕಗಳಿಗೂ ಹೆಚ್ಚುಕಾಲ ತಮ್ಮ ರಚನೆಗಳ ಮೂಲಕ ಜನಸಾಮಾನ್ಯರಿಗೂ ಬುದ್ಧಿಜೀವಿಗಳಿಗೂ ಸಮಾನವಾಗಿ ಸಾಹಿತ್ಯ ಕ್ಷೇತ್ರ ನಿಲುಕುವಂತೆ ಮಾಡಿದರು. ಹಾಗಾಗಿಯೇ ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಗಳಲ್ಲೊಂದಾದ ಜ್ಞಾನಪೀಠದಿಂದ, ರಾಷ್ಟ್ರದ ಗೌರವದ ಸಂಕೇತವಾದ ಪದ್ಮವಿಭೂಷಣದವರೆಗಿನ ಗೌರವಾದರಗಳು ದೊರೆತುವು. 'ಮಾತೃಭೂಮಿ' ಪತ್ರಿಕೆಯ ಸಂಪಾದಕ, ಕೇರಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ, ಕೇಂದ್ರಸಾಹಿತ್ಯಅಕಾಡೆಮಿಯಸದಸ್ಯ, ತುಂಜತ್ತ್ ಸ್ಮಾರಕ ಟ್ರಸ್ಟಿನ ಅಧ್ಯಕ್ಷ ಮೊದಲಾದ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಎಂ.ಟಿ. ಅವರ ಸೇವೆ ಸದಾ ಸ್ಮರಣೀಯವೇ ಆಗಿದೆ.

ಸಾಹಿತ್ಯ, ಪತ್ರಿಕೆಗಳ ಮೂಲಕ ಎಂ.ಟಿ. ನೀಡಿದ ಕೊಡುಗೆ ಸಮಕಾಲೀನರನ್ನು ಮಾತ್ರ ಪ್ರಭಾವಿಸಿದ್ದಲ್ಲ. ಜೊತೆಗೆ ಎಳೆಯ ತಲೆಮಾರನ್ನು ಸರಿಯಾದ ದಾರಿಯಲ್ಲಿ ಕ್ರಮಿಸುವಂತೆ ಹಾಗೂ ಬೆಳೆಯುವಂತೆ ಪ್ರಚೋದನಾತ್ಮಕವಾಗಿಯೂ ಪರಿಣಮಿಸಿದೆ. 'ಮಾತೃಭೂಮಿ' ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸುವ ಅವಧಿಯಲ್ಲಿ ಈ ಸಾಧನೆಯನ್ನು ಮಾಡಲು ಅವರಿಗೆ ಸಾಧ್ಯವಾಯಿತು.

ಕನ್ನಡದಲ್ಲಿ ಎಂ.ಟಿ. ಅವರ ಬಹುತೇಕ ಕಥೆ, ಕಾದಂಬರಿಗಳು ಓದುಗರಿಗೆ ಲಭ್ಯವಿವೆ. ನನ್ನನ್ನು ಒಳಗೊಂಡಂತೆ ಬಿ.ಕೆ. ತಿಮ್ಮಪ್ಪ, ಕೆ.ಎಸ್. ಕರುಣಾಕರನ್, ಸಿ. ರಾಘವನ್, ಕೆ.ಕೆ. ನಾಯರ್, ಕೆ.ಕೆ. ಗಂಗಾಧರನ್, ಪಾರ್ವತಿ ಜಿ. ಐತಾಳ ಮೊದಲಾದವರ ಅನುವಾದಗಳಿಂದ ಎಂ.ಟಿ. ಸಾಹಿತ್ಯ ಕನ್ನಡದ ಭಾಗವಾಗಿದೆ. 'ಇರುಳಿನ ಆತ್ಮ' ಎಂಬ ಇಪ್ಪತ್ತೈದು ಕಥೆಗಳ ಸಂಕಲನವೊಂದು ಇಷ್ಟರಲ್ಲಿಯೇ ಕನ್ನಡಿಗರಿಗೆ ಒದಗಲಿದೆ.

ಧರ್ಮಾತೀತ, ಜಾತ್ಯತೀತ ನಡೆ ನುಡಿಗಳಿಂದ ವೈಯಕ್ತಿಕ ಬದುಕನ್ನು ರೂಪಿಸಿಕೊಂಡ ಎಂ.ಟಿ. ಅವರ ಸಾಹಿತ್ಯ ಕೃತಿಗಳು ನಮ್ಮ ಮುಂದಿವೆ. ಅವು ಅಪ್ರತಿಮ ಪ್ರತಿಭಾಶಾಲಿಲೇಖಕರೊಬ್ಬರಕಲಾಕೃತಿಗಳು. ಅವುಗಳು ಮುಂದಿನ ಪೀಳಿಗೆಗೂ ಅರಿವಿನ ದಾರಿದೀಪಗಳಾಗಿ ಉಳಿಯಬಲ್ಲವು.

ಅನೇಕ ವಿಚಾರಗಳ ಬಗೆಗೆ ಅವರು ಮೌನ ವಹಿಸಿದ್ದು ನಿಜವಿರಬಹುದು. ಅವರ ಮೌನಕ್ಕೂ ಒಂದು ಅರ್ಥವಿದೆ ಎಂಬುದನ್ನು ಸಾಹಿತ್ಯಲೋಕ ಅರಿತಿದೆ. ಎಲ್ಲೆಡೆಗಳಲ್ಲೂ ಎಂ.ಟಿ. ಮಿತಭಾಷಿಯಾಗಿದ್ದರು. ಸಾಹಿತ್ಯ ರಚನೆಗೆ ಮೌನದ ಬೆಂಬಲ ಬೇಕೆಂಬ ಟ್ಯಾಗೋರರ ವಿಚಾರದಲ್ಲಿ ಅವರಿಗೆ ನಂಬಿಕೆಯಿದ್ದಿರಬಹುದು. ಅದನ್ನು ಪಾಲಿಸಲೆಂಬಂತೆ ಕೋಳಿಕ್ಕೋಡಿನ ಸಾರ್ವಜನಿಕ ಸ್ಮಶಾನ 'ಸ್ಮೃತಿ ಪಥ'ದಲ್ಲಿ ಚಿರಮೌನಿಯಾದರು. ಅವರ ಕಲಾಕೃತಿಗಳು ಮುಂದೆಯೂ ಮಾತನಾಡುತ್ತಿರುತ್ತವೆ. ಅವುಗಳಿಗೆ ನಾವೆಲ್ಲಾ ಕಿವಿಯಾಗೋಣ.

●